IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಸ್ವಾತಂತ್ರ್ಯ ಚಳುವಳಿಗೆ ಕನ್ನಡ ರಂಗಭೂಮಿಯ ಪ್ರಭಾವ

ಬಾಲರಾಜು ಬಿ ವಿ
ಸಹಾಯಕ ಪ್ರಾಧ್ಯಾಪಕರು
ಕ್ರೈಸ್ಟ ಅಕಾಡಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ ಸ್ಟಡೀಸ್
ಬೇಗೂರ್- ಕೊಪ್ಪ ರೋಡ್
ಸಕಲವಾರ ಪೋಸ್ಟ್, ಹುಲ್ಲಹಳ್ಳಿ
ಆನೇಕಲ್ ತಾ. ಬೆಂಗಳೂರು- 560083

ಸ್ವಾತಂತ್ರ ಚಳುವಳಿಯ ಕಾವು ಮತ್ತು ಆವೇಶ ಪಡೆದಿದ್ದಕ್ಕೆ ಮಹಾತ್ಮ ಗಾಂಧೀಯವರ ಪ್ರಭಾವ ಹೆಚ್ಚಾಗಿತ್ತು.ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಕಲ್ಪನೆ ಎನ್ನುವುದು ಪ್ರತ್ಯಕ್ಷವಾಗಿ ಮೂಡಿದಾಗ ಅಲ್ಲಿ ನಾವು ಪರೋಕ್ಷವಾಗಿ ನೋಡ್ತಾ ಇದ್ದೇವೆ. ಕೆಲವು ಇತಿಹಾಸ, ಪುರಾಣ ರಾಮಾಯಣ ಮತ್ತು ಮಹಾಭಾರತ ಎಲ್ಲ ಕಥೆಯನ್ನು ತೆಗೆದುಕೊಂಡಾಗ ಹಾಗೂ ಆ ಕಥೆಯ ಹಿನ್ನೆಯಲ್ಲಿಯೇ ತೆಗೆದುಕೊಂಡಾಗ ಆ ಸಮಕಾಲೀನ ರಾಷ್ಟ್ರೀಯತೆಯ ಒಂದು ಕಲ್ಪನೆಯನ್ನು ತೆಗೆದು ಕೊಂಡಾಗ ಅದು ನಮ್ಮ ಅರಿವೆಗೆ ಬರದ ಹಾಗೆ ಮಾಡುವುದು. ನಮ್ಮಲ್ಲಿಯೇ ಇದ್ದಂತಹ ಕಲ್ಪನೆಗಳು, ಐತಿಹಾಸಿಕ ಕಲ್ಪನೆಗಳು ಮತ್ತು ರಾಜಕೀಯ ಕಲ್ಪನೆಗಳು ಅವೆಲ್ಲ ಒಂದು ಸ್ಪಷ್ಟ ಗುರುತನ್ನ ಪಡೆಯುವುದಕ್ಕೆ ನಾಟಕದಿಂದ ಸಾಧ್ಯವಾಗಿತ್ತು. ಉದಾ; ಜಗಜ್ಯೋತಿ ಬಸವೇಶ್ವರ ನಾಟಕವನ್ನು ನೋಡುವುದಾದರೆ ನಾಟಕದಲ್ಲಿ ಬಸವೇಶ್ವರನನ್ನು ನಾವು ನೋಡುವ ರೀತಿ ಅವರನ್ನ ನಾವು ಮನಸ್ಸಿನಲ್ಲಿ ಚಿತ್ರಿಸುವ ರೀತಿ ,ಹಾಗೇ ರಾಮಾಯಣದ ಪಾತ್ರಗಳು ಮತ್ತು ಮಹಾಭಾರತದ ಪಾತ್ರಗಳು .ರಾಮ ಯಾರು ಎನ್ನುವ ಪ್ರಶ್ನೆ ಬಂದಾಗ ನಾಟಕದಲ್ಲಿನೋಡಿದ ವ್ಯಕ್ತಿಯೇ ರಾಮನಾಗಿ ನಮ್ಮ ಕಣ್ಣ ಮುಂದೆ ಕಾಣಿಸಿಕೊಳ್ಳುತ್ತಾನೆ. ಅಷ್ಟರ ಮಟ್ಟಿಗೆ ರಾಮನ ಪಾತ್ರವನ್ನು ಚಿತ್ರಿಸಲಾಗಿರುತ್ತವೆ. ಇದನ್ನೇ ನಾವು ರಾಷ್ಟ್ರೀಯ ಕಲ್ಪನೆ ಎನ್ನುತ್ತೇವೆ. ಹಾಗೆ ನಮ್ಮ ದೇವಾನು ದೇವತೆಗಳು ಹಾಗೂ ಐತಿಹಾಸಿಕ ವ್ಯಕ್ತಿಗಳ ಕುರಿತ ಕಲ್ಪನೆ ಇದನ್ನು ರಾಷ್ಟ್ರೀಯ ಸ್ಮೃತಿ ಎಂದು ಕೆ ಅಶ್ವರ ಅವರು ಕರೆದಿದ್ದಾರೆ.

ಈ ಕಂಪನಿ ನಾಟಕಗಳು ನಟ ನಟಿಯರು ಬರುತ್ತಿದ್ದಂತ ಕಾಲ. ಹಾಗೂ ಸ್ವಾತಂತ್ರ ಚಳುವಳಿ ಬಿರುಸಾಗುತ್ತಿದ್ದಂತಹ ಕಾಲ ಎರಡು ಒಂದೇ ಆಗುತ್ತಿದ್ದಂತ ಕಾಲ. ಅದರಿಂದ ಏನು ಪರಿಣಾಮ ಆಗುತಿತ್ತು ಅಂದರೆ, ಸ್ವಾತಂತ್ರ ಚಳಿವಳಿಯ ಮೂಲಕವಾಗಿ ನಾವು ಏನು ಸ್ಪೂರ್ತಿಯನ್ನು ಪಡೆದುಕೊಂಡವ್ಪೋ ಯಾವ ಆವೇಶವನ್ನು ಪಡೆದುಕೊಂಡವ್ಪೋ, ದೇಶಭಕ್ತಿ, ರಾಷ್ಟ್ರ ಪೇಮ, ಮುಂತಾದವೆಲ್ಲ ನಾವು ಮಾತ್ರವಲ್ಲ. ನಾಟಕಗಳು ಅದನ್ನ ನೀರಿಕ್ಷೆ ಮಾಡುತ್ತಿದ್ದವು.

ಅಂದರೆ ನಾಟಕದವರು ಕೂಡ. ಅಂದರೆ ನಾಟಕ ನಟ ನಟಿಯರು, ನಾಟಕವನ್ನು ಬರೆಯುವವರು, ಬಾಲಕರು ಮುಂತಾದವರು ದಬ್ಬಾಳಿಕೆಯನ್ನ ಸಹಿಸಿಕೊಳ್ಳುತ್ತಿದ್ದರು. ಅದರ ಬಗ್ಗೆ ಹೋರಾಟಡುವ ಧೈರ್ಯ ಅವರಿಗೆ ಇರಲಿಲ್ಲ. ಯಾಕೆಂದರೆ ನಾಟಕಕ್ಕೆ ಒಂದು ಉದ್ಯಮವಾಗಿ ಗೆಲ್ಲಬಲ್ಲ ಶಕ್ತಿ ಬೇಕಾಗಿತ್ತು. ಆದರೂ ಅವರು ನಾನಾ ರೀತಿಯಲ್ಲಿ ತಮ್ಮ ತುಡಿತಗಳನ್ನು, ನಾನಾ ರೀತೀಯ ವಕ್ರೋಕ್ತಿ ಮೂಲಕವಾಗಿ ಅದನ್ನ ಗೆಲ್ಲಲು ಪ್ರಯತ್ನಿಸುತ್ತಿದ್ದರು. ಅದನ್ನು ತಾಂತ್ರಿಕ ವಕ್ರೋಕ್ತಿ ಎಂತಲೂ ಕರೆಯಬಹುದು. ಅದನ್ನ ಆ ಮೂಲವಾಗಿ ವ್ಯಕ್ತ ಪಡಿಸಿದ್ದನ್ನ ನಾವು ನೋಡಬಹುದು. ಅದರಲ್ಲಿ ಉಡುಗೆ ತೊಡುಗೆಯಲ್ಲಿಯೂ ವಿಭಿನ್ನತೆಯನ್ನು ನೋಡಬಹುದು.

ನಾಟಕದಲ್ಲಿ ಸಾಮಾನ್ಯವಾಗಿ ಖಳನಾಯಕರನ್ನ ಬ್ರಿಟಿಷರಿಗೆ ಹೋಲಿಸಲಾಗುತ್ತದೆ. ಅದರಲ್ಲೂ ಖಳನಾಯಕರ ವೇಷಭೂಷಣಗಳು ಮತ್ತು ಮಾತುಗಳು ವಕ್ರವಕ್ರವಾಗಿರುತ್ತವೆ. ಜೊತೆಗೆ ಅದರಲ್ಲಿ ಬರುವ ಹಾಡುಗಳು ಸಹ ಇಂಗ್ಲೀಷಿನ ರಾಗಗಳ ತುಣುಕುಗಳನ್ನು ಹಾಕಲಾಗಿರುತ್ತದೆ. ಖಳನಾಯಕ ಬಂದ ಅಂದರೆ ಪ್ರೇಕ್ಷಕರಿಗೆ ಅರ್ಥವಾಗುತಿತ್ತು. ಆ ರೀತಿಯಲ್ಲಿ ಆ ರಾಗವನ್ನು ಸಂಯೋಜನೆಯನ್ನು ಮಾಡಲಾಗಿತ್ತು. ಈ

ರೀತಿಯ ಪರೋಕ್ಷವಾದ ಮಾದರಿಯಲ್ಲಿ ಅದನ್ನ ತೋರಿಸಲಾಗುತ್ತಿತ್ತು. ಅದೇ ರೀತಿ ನಾಟಕಗಳನ್ನ ನೋಡಿದಾಗ ದೇಶಭಕ್ತರ ಚರಿತ್ರೆಯನ್ನ ನೋಡಬಹುದಾಗಿತ್ತು. ಬ್ರೀಟಿಷರ ವಿರುದ್ಧ ಇದ್ದ ಆ ಆವೇಶವನ್ನು ಗುರಿತಿಸಲು ಸಾಧ್ಯವಾಗಿತ್ತು. ವೃತ್ತಿಮಂಡಳಿಯಲ್ಲೂ ಕೂಡ ಬೇಡ್ವಾ ಇರೋದನ್ನು ಕೊಡುವುದಕ್ಕೋಸ್ಕರ ಆ ಪರಿಸ್ಥಿತಿಯನ್ನು ಚಿತ್ರಿಸಲಾಗುತ್ತಿತ್ತು. ಈಗಾಗಲೇ ನೋಡಿರುವ ಹಾಗೆ ನಾಟಕ ಬರೆದರೆ, ಮತ್ತರು ನಾಟಕವನ್ನು ಮಾಡಿದರೆ ಏನಾಗುತ್ತದೆ ಎನ್ನುವ ಪರಿಣಾಮ ಅವರಿಗೆ ಗೊತ್ತಿತ್ತು. ಮತ್ತೆ ಅದರ ಪರಿಣಾಮ ಭೀಕರವಾಗಿರುತಿತ್ತು. ಆದರೂ ಸಹ ೪೦ – ೫೦ ಜನ ಇರುವ ಆ ಮಂಡಳಿಯನ್ನು ಸಾಕುವ ಮತ್ತು ನಿರ್ವಹಿಸುವ ಜವಾಬ್ದಾರಿ ಹಿರಿದಾಗಿದ್ದರೂ, ಅದನ್ನು ಬಿಡದೆ ಅತ್ಯಂತ ಆವೇಶವನ್ನು ನೀಡುವಂತಹ ಆ ದೇಶ ಭಕ್ತಿಯನ್ನು ಮೇಳೈಸುವಂತಹ ಹಲವಾರು ನಾಟಕಗಳನ್ನು ರಚಿಸಲಾಗಿತ್ತು. ಉದಾ. ಸಂಗೊಳ್ಳಿ ರಾಯಾಣ್ಣ,ಕಿತ್ತೂರಿನ ರಾಣಿ ಚೆನ್ನಮ್ಮ, ಅದನ್ನ ವೀರ ಕೇಶರಿ ಕಿತ್ತೂರಿನ ರಾಣಿ ಚೆನ್ನಮ್ಮ ಎಂದು ಬರೆಯಲಾಗಿದೆ. ಹಾಗೇಯೆ ಸಿಂಧೂರ ಲಕ್ಷಣ , ನರಗುಂದದ ಬಂಡಾಯ,ಇಂತಹ ಬೇಕಾದಷ್ಟು ನಾಟಕಗಳು ಕಂಡು ಬರುತ್ತವೆ.

ಇಂತಹ ನಾಟಕವನ್ನು ಅಭಿನಯಿಸುವಾಗ ಒಳ್ಳೋಳ್ಳೆಯ ನಟರನ್ನು ಆರಿಸಿಕೊಂಡು ನಾಟಕವನ್ನು ಅಭಿನಯಿಸಲಾಗಿದೆ. ಅದರಲ್ಲೂ ಕಿತ್ತೂರಿನ ರಾಣಿ ಚೆನ್ನಮ್ಮ ನಾಟಕವನ್ನು ಅಭಿನಯಿಸಲು ಶಿವಲಿಂಗಸ್ವಾಮಿ ಸಾವಳಗಿ ಮಠದ ಸ್ವಾಮಿಗಳು, ಕಿತ್ತೂರಿನ ಕೇಶರಿ ಕರ್ನಾಟಕ ಗಂದರ್ವ ಮುರುಗೋಳು ಗಂದಾದರಪ್ಪ, ಸಾದಾಶಿವಪ್ಪ, ಏಣಗಿ ಬಾಳಪ್ಪ ಇಂತಹ ಶ್ರೇಷ್ಟ ನಟರನ್ನೆಲ್ಲ ಸೇರಿಸಕೊಂಡು ಆ ಕಾಲದಲ್ಲಿ ೬೦.೦೦೦ ರೂಪಾಯಿಗಳನ್ನು ಖರ್ಚುಮಾಡಿ ಅತ್ಯಂತ್ಯ ವೈಭವದ ಆ ನಾಟಕವನ್ನ ಪ್ರದರ್ಶನ ಮಾಡಲಾಯಿತು. ಪರಿಣಾಮ ಎಷ್ಟು ಅಧ್ಭುತವಾಗಿತ್ತೆಂದರೆ, ಮೊದಲಿನ ಪ್ರದರ್ಶನವನ್ನು ನೋಡಿ ಹೊರಬಂದ ಪ್ರೇಕ್ಷಕರು ಸುಮ್ಮನೆ ಬರಿ ಕೈಯಲ್ಲಿ ಹೋಗಲಿಲ್ಲ, ಕಂಡಕಂಡಲ್ಲಿ ವಿದೇಶಿ ವಸ್ತುಗಳನ್ನು ಸುಟ್ಟಿಕೊಂಡು ಹೋದರು, ಸೇಂದಿ ಗಿಡಗಳನ್ನು ಕಂಡರೆ ಅದನ್ನು ಕತ್ತರಿಸಕೊಂಡು ಹೋದರು. ಅಷ್ಟು ಪರಿಣಾಮಕಾರಿಯಾದ ನಾಟಕ ಎರಡೇ ಪ್ರದರ್ಶನ ಕಂಡು ಮೂರನೇ ಪ್ರದರ್ಶನಕ್ಕೆ ಬ್ರೀಟಿಷರ ಕಣ್ಣು ಬಿದ್ದು, ಅದರ ಪ್ರದರ್ಶನವನ್ನು ರದ್ದು ಪಡಿಸಲಾಯಿತು.

ಈ ನಾಟಕದ ರದ್ದತಿಗೆ ನಾಟಕ ಮಾತ್ರವಲ್ಲ ಅದರಲ್ಲಿ ಬರುವ ಮಾತುಗಳು ಹೆಚ್ಚು ಪರಿಣಾಮಕಾರಿಯಾಗಿದ್ದವು ಎನ್ನುವುದನ್ನು ತಿಳಿಯಬಹುದು. ಯುದ್ಧದಲ್ಲಿ ತನ್ನವರೇ ತನಗೆ ಮೋಸ ಮಾಡಿದಾಗ ಆಗುವ ನೋವಿನಿಂದ ಅವಳಾಡುವ ಮಾತುಗಳು ಎಷ್ಟು ಆವೇಶದಿಂದ ಕೋಡಿದವು ಎಂದರೆ ಅವಳು ದೇಶವನ್ನ ಸ್ವಾತಂತ್ರವನ್ನ ರಕ್ಷಿಸುವವಳೇ, ಇವಳು ಕನ್ನಡವನ್ನು ಕಾಪಾಡುವ ತಾಯಿಯೇ ಇವಳು ? ಹಾಗೇಯೇ ಇವಳು ಆವೇಶದ ಚಿಲುಮೆಯೇ ಇವಳು ?ಎಂದು ಜನ ಪ್ರೇಕ್ಷಕ ಗೃಹದಲ್ಲಿ ಇರುವಂತಹ ಪುರುಷರನ್ನೆಲ್ಲ ಕೆರಳಿಸುವಂತಹ ಮಾತುಗಳನ್ನ ಅವಳು ಹಾಡುತ್ತಿದ್ದಳು, ಇಂತಹ ಆವೇಶದ ಮಾತುಗಳನ್ನ ಇಂತಹ ಸಂಭಾಷಣೆಗಳು ಇರುವಂತಹ ನಾಟಕಗಳನ್ನ ಅಧಿಕಾರಿಗಳಿಗೆ, ಬ್ರೀಟಿಷರಿಗೆ ಗೊತ್ತಾದಾಗ, ಈ ಉತ್ತರ ಕರ್ನಾಟಕದಲ್ಲಿ ತುಂಬಿರುವ ಸ್ವಾತಂತ್ರ ಚಳುವಳಿಯ ವೇಗಕ್ಕೆ, ಇವರ ನಾಟಕಗಳೇ ಕಾರಣ ಎಂದು ಇದನ್ನು ನಿಷೇಧಿಸಲಾಯಿತು.

ಅಬ್ಬಿಗೇರಿ ಕಂಪನಿ ಕಿತ್ತೂರಿನ ಚೆನ್ನಮ್ಮ ನಾಟಕವನ್ನ ಗದಗ, ಹುಬ್ಬಳ್ಳಿ, ದಾರಾವಾಡ, ಕಿತ್ತೂರು, ಬೈಲಹೊಂಗಲು ಮುಂತಾದ ಕಡೆ ಪ್ರದರ್ಶನ ಮಾಡುತ್ತಾ ಹೋಗುತ್ತಿತ್ತು. ಆದರೆ ಮೈಸೂರು ಮತ್ತು ಬೆಂಗಳೂರಿಗೆ ಬರವಷ್ಟರಲ್ಲಿ ಅದನ್ನು ಸಂಪೂರ್ಣ ನಿಷೇಧಿಸಾಗುತ್ತದೆ. ನಂತರದಲ್ಲಿ ೧೯೨೪ರಲ್ಲಿ ಬಸವೇಶ್ವರ ಸಂಗೀತ ನಾಟಕ ಮಂಡಳಿಯು ಚೆನ್ನಪ್ಪ ವಾಲಿ ಅವರ ಸೋದರ ಶಿವಲಿಂಗಪ್ಪ ವಾಲಿ ಇವರ ಮಂಢಳಿಯಲ್ಲಿದ್ದವರಿಗೆಲ್ಲ, ನಾಟಕದ ಜೊತೆಗೆ ಸ್ವಾತಂತ್ರ ಚಳುವಳಿಗೆ ಬಗ್ಗೆ ಅಪಾರ ಆಸಕ್ತಿ ಸ್ಪೂರ್ತಿ ಇತ್ತು ರಾಷ್ಟ್ರೀಯ ಚಳುವಳಿಯ ಬಗ್ಗೆ ಪ್ರಭಾವಿತರಾದ ಇವರು ವೀರ ಸಂಗೋಳ್ಳಿ ರಾಯಣ್ಣ ನಾಟಕವನ್ನು ಬರೆಸಿ ಅದನ್ನ ಆಡುವುದಕ್ಕೆ ಶುರು ಮಾಡಿದರು. ರುದ್ರಗೌಡ ಪಾಟೀಲ್ ಅವರು ಸಂಗೋಳ್ಳಿ ರಾಯಣ್ಣನಿಗೆ ಬೇಕಾದ ವಿಶೇಷವಾದ ಸಂಭಾಷಣೆಯನ್ನು ಬರೆದುಕೊಟ್ಟರು. ಇದು ಗೋಕಾಕದಲ್ಲಿ ಮೊದಲ ಪ್ರದರ್ಶನವನ್ನು ಕೊಡಲಾಗಿತ್ತು. ರಾಷ್ಟ್ರಾಭಿಮಾನದ, ಆವೇಶದಲ್ಲಿ ನಡೆದ ಪ್ರದರ್ಶನ ಇದಾಗಿತ್ತು. ಕಾರ್ಯಕರ್ತರ ನೆರವಿನಿಂದ ಎರಡು ಪ್ರದರ್ಶನ ನಡೆದು ಮೂರನೇ ಪ್ರದರ್ಶನೆಕ್ಕೆ ಕೊನೆಯಾಯಿತು. ಬ್ರಿಟಿಷರ ಅವರನ್ನ ತಡೆಯುವಂತಹ ಕೆಲಸವನ್ನು ಮಾಡುತ್ತಿದ್ದಾರೆ.

ಈ ಬ್ರಿಟಿಷರ ಪ್ರಭಾವದಿಂದಾಗಿ ನಾಟಕಕಾರರು ಹೆಚ್ಚು ಬೆದರದೆ ಮತ್ತೆ ಮತ್ತೆ ಹೊಸ ನಾಟಕಗಳನ್ನು ರಚನೆ ಮಾಡಲು ತೋಡಗುತ್ತಿದ್ದಾರೆ. ಹೆಚ್ಚು ಹೆಚ್ಚುಉತ್ಸಾಹದಿಂದ ಮಾಡುತ್ತಿದ್ದಾರೆ. ಚೆನ್ನಪ್ಪನವರು ಅವರ ಸ್ನೇಹಿತರ ಜೊತೆ ಸೇರಿ ಬ್ರಿಟಿಷರ ವಿರುದ್ಧ ಪಿತೂರಿಯನ್ನ ನಡೆಸುತ್ತಿದ್ದಾರೆ. ಅದರಿಂದ ಏನಾಗುತ್ತಿದೆ ಎಂದರೆ ಅವರನ್ನ ದಸ್ತಗಿರಿ ಮಾಡಿ ಜೈಲಿಗೆ ಕಳುಹಿಸಲಾಗುತ್ತದೆ. ಜೈಲಿಗೆ ಹೋದ ಚೆನ್ನಪ್ಪ ತನ್ನ ಕಂಪನಿಯನ್ನು ಜನರನ್ನ ಮನೆಗೆ ಹೋಗಕೂಡದೆ ಅವರನ್ನ ಒಂದು ವರ್ಷಗಳ ನೇಸರ್ಗಿಯಲ್ಲಿಟ್ಟುಕೊಂಡು ಅವರ ಎಲ್ಲ ವೆಚ್ಚವನ್ನ ನೋಡಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಅವರು ತಮ್ಮ ಒಂದು ಹೊಲವನ್ನು ಮಾರುತ್ತಿದ್ದಾರೆ.

ಅವರ ನಾಟಕವನ್ನುಪ್ರದರ್ಶನ ಮಾಡುವಂಹತ ಹುಚ್ಚು ಅಭಿಮಾನ ಎಷ್ಟು ಗೀಳಿ ಎಷ್ಟು ನಿಷ್ಟವಾಗಿತ್ತು ಎಂದರೆ ಜನರಿಗೆ ನಾಟಕದಿಂದ ಉಂಟಾದ ಸ್ಪೂರ್ತಿ ಆವೇಶ ಎಲ್ಲರಿಗೂ ಎಷ್ಟು ಮೀತಿ ಮೀರಿತು ಎಂದರೆ ಈ ನಾಟಕಗಳು ಯಾವಾಗ ಪ್ರದರ್ಶನವಾಗುತ್ತದೆ ಎಂದು ಕಾತುರದಿಂದ ಕಾಯುತ್ತಿದ್ದರು. ಒಬ್ಬ ಯೋದ

ಸ್ಯೆನದಿಂದ ಮರಳಿ ಬಂದು ತನಗೆ ನಾಟಕದ ಒಂದು ಪ್ರಯೋಗವನ್ನ ನನಗೆ ಕೋಡಬೇಕೇಂದು ಕೇಳುತ್ತಿದ್ದಾನೆ. ಮತ್ತೆ ಅದರ ಪ್ರದರ್ಶನಕ್ಕೆ ಬ್ರಿಟಿಷರಿಂದ ಅನುಮತಿಯನ್ನ ತರಿಸಿಕೊಡುತ್ತೇನೆ ಎಂದು ಹೇಳುತ್ತಿದ್ದಾನೆ. ಅಧಿಕಾರಿಗಳ ಹತ್ತಿರ ಕಾಡಿ ಬೇಡಿ ತಾನು ಯೋಧ ನಾಗಿದ್ದೆ ನನ್ನ ಕೆಲಸಕ್ಕಾಗದಾರೂ ಗೌರವ ಕೊಟ್ಟು ನಾಟಕಕ್ಕೆ ಅನುಮತಿಯನ್ನ ಕೊಡಿ ಎಂದು ಬ್ರಿಟಿಷರ ಬಳಿ ಮೊರೆಯಿಡುತ್ತಿದ್ದಾನೆ.

ಹಾಗೆ ನಾಟಕ ನಡೆಯುವಾಗ ಎಲ್ಲೆಲ್ಲಿಂದಲೋ ಜನ ನಾಟಕವನ್ನು ನೋಡಲು ಬರತೋಡಗಿದರು ಸಂಗೋಳ್ಳಿರಾಯಣ್ಣ ನಾಟಕ ನಡಿತಿದೆ ಎಂದು, ಅದಕ್ಕೆ ಗಾನಪ್ಪರಾಯರು ಎನ್ನುವಂತಹ ಇನಮಾದಾರರು ಬಂದಿದ್ದರು. ನಾಟಕ ನಡೆಯುವಂತಹ ಸಂದರ್ಭದಲ್ಲಿ ರಾಯಣ್ಣನನ್ನುಗಲ್ಲಿಗೇರಿಸುತ್ತಾದ್ದಾಗ, ಗಲ್ಲಿಗೇರಿಸುವ ಸಂದರ್ಭದಲ್ಲಿಅವನ ಕೊನೆಯ ಬಾಷಣ ಎಷ್ಟು ಆವೇಶ ಬರಿತವಾಗಿತ್ತೆಂದರೆ ಇಡೀ ಪ್ರೇಕ್ಷಕ ಮಂದಿರ ಪೂರ್ತಿಯಾಗಿ ರೋಮಾಂಚನದಿಮದ ತುದಿಗಾಲಲ್ಲಿ ನಿಂತು ಆ ನಾಟಕವನ್ನು ನೋಡುತ್ತಿದ್ದರು.

ಹಾಗೆ ಆತ ಭಾಷಣವನ್ನು ಮುಗಸಿದ ನಂತರ ಅವರೆಲ್ಲ ಆವೇಶದಿಂದ ಹೋಗಿ ಆ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿದ್ದ ದಾನಪ್ಪ ವೇಷದಾರಿಯ ಬಳಿ ಹೋಗಿ ದಾಳಿಯನ್ನ ಮಾಡುತ್ತಿದ್ದಾರೆ. ಅವರ ಹೋಡಿಯುವ ಹೊಡೆತಕ್ಕೆ ತಕ್ಷಣ ಚೆನ್ನಪ್ಪ ವಾಲಿಯವರು ರಂಗದ ಮೇಲೆ ಹೋಗಿ ದಾನಪ್ಪ ವೇಷದಾರಿಯನ್ನು ಎತ್ತಿ ತಂದು ರಂಗದ ಮೇಲಿಂದ ಅವರಿಗೆ ಸೀರೆಯನ್ನು ಸುತ್ತಿಸಿ ಹೊರಗಡೆ ಕಳುಹಿಸಿದರು ಎನ್ನುವ ಒಂದು ಮಾತು ಕೇಳಿ ಬರುತ್ತದೆ. ಅಂದರೆ ಜನರಿಗೆ ಅವರ ಮೇಲೆ ಆದ ಪರಿಣಾಮವನ್ನು ನಾವು ಕಾಣುತ್ತಿದ್ದವೆ.

೧೯೩೭ ರಲ್ಲಿ ನಡೆದ ಚುನಾವಣೆಯಲ್ಲಿ ಚೆನ್ನಪ್ಪನವರು ಕಾಂಗ್ರೆಸ್ಸಿನ ಪರವಾಗಿ ಕೆಲಸ ಮಾಡಿ ಆ ಪ್ರಾಂತಿಯ ಸ್ವಾಯತ್ತತೆ ಸಿಕ್ಕಾಗ ಆ ಪ್ರಭಾವವನ್ನ ಬಳಸಿ ಮತ್ತೆ ಆ ನಾಟಕವನ್ನ ಪ್ರದರ್ಶನ ಮಾಡುವುದಕ್ಕೆ ಅನುಮತಿಯನ್ನು ತೆಗೆದುಕೊಳ್ಳುತ್ತಿದ್ದಾರೆ.

ಹೀಗೆ ಬ್ರಿಟಿಷರಿಗೆ ಭಯ ಹುಟ್ಟಿಸಿದ ನಾಟಕ ಎಂದರೆ ನರಗುಂದದ ಬಂಡಾಯ. ಇದು ಬ್ರಿಟಿಷ್ ಅಧಿಕಾರಿಯ ವಿರುದ್ಧ ಹೋರಾಡಿದ ನರಗುಂದದ ಬಾಬಾ ಸಾಹೇಬನ ಕತೆ. ಇದನ್ನ ಬರೆದವರು ಅಚ್ಯುತ್ ರಾಯ. ರಂಗದ ಮೇಲೆ ಪ್ರದರ್ಶನ ಮಾಡಿದವರು ಅಸುಂಡಿ ಕಂಪನಿಯ ಲಕ್ಷ್ಮೀರಾಯ ವಸುಂಡಿ ,ಈ ಕಥೆಯಲ್ಲಿ ಬರುವ ಮುಖ್ಯ ಅಂಶವೆಂದರೆ ಮೆನ್ಸನ್ ಎನ್ನುವ ಬ್ರೀಟಿಷ್ ಅಧಿಕಾರಿಯ ಕೊಲೆ, ಮೆನ್ಸನ್ ಅಧಿಕಾರಿ ಬಾಬಾ ಸಾಹೇಬನನ್ನು ಹುಡುಕಿಕೊಂಡು, ಮತ್ತು ಚಳುವಳಿಗಾರರನ್ನು ಹುಡುಕಿಕೊಂಡು ಹೋಡಾಡುವ ಸಮಯದಲ್ಲಿ ವಿಶ್ರಾಂತಿಗಾಗಿ ಒಂದು ಕಡೆ ಮಾರಮ್ಮ ಗುಡಿಯ ಬಳಿ ಇದ್ದಾಗ, ಆ ವಿಷಯವನ್ನ ತಿಳಿದ ರಾಯಣ್ಣ ಮತ್ತು ಅವನ ಗೆಳೆಯ ವಿಷ್ಣು ಪಾರ್ಥರವರು ಹುಡುಕಿಕೊಂಡು ಬರುವ ಸಂದರ್ಭದಲ್ಲಿ ಅವರಿಗೆ ತಿಳಿಯುತ್ತದೆ, ತಕ್ಷಣವೇ ಅವರು ಮೆನ್ಸನ್ ನನ್ನು ನಾನಾ ರೀತಿಯಲ್ಲಿ ಬೈದು ಅವನನ್ನು ಗುಡಿಯಿಂದ ಹೊರಬರುವಂತೆ ಹೇಳುತ್ತಾರೆ. ನಂತರ ಅವರನ್ನು ಹೊರ ಎಳೆದು ತಂದು ಅವನನ್ನು ಅವರ ಖಡ್ಗದಿಂದ ಕೊಲ್ಲುತ್ತಾರೆ.

ಆ ಒಂದು ಸನ್ನೀವೇಶ ಎಷ್ಟು ಭಯಾನಾಕವಾಗಿತ್ತದೆಂದರೆ. ಅದನ್ನ ನೋಡಿದ ಕೂಡಲ ನಾಟಕದ ಪರವಾನಿಗೆ ರದ್ದಾಗುತ್ತಿತ್ತು. ನಂತರ ಭೀಮಪ್ಪ ಬಹಳ ರೀತಿಯಲ್ಲಿ ಬೇಡಿ ಕಾಡಿ ಮತ್ತೆ ಬ್ರಿಟಿಷರಿಂದ ಅನುಮತಿಯನ್ನು ಪಡೆದುಕೊಳ್ಳಬೇಕಾದರೆ ನಾನಾ ರೀತಿಯ ಷರತ್ತುಗಳನ್ನು ಹಾಕಬೇಕಾಗುತ್ತದೆ. ಒಂದು ಮೆನ್ಸನ್ ಕೊಲೆಯ ಪ್ರಸಂಗವನ್ನ ತೆಗೆಯಬೇಕು ಎರಡು, ನರಗುಂದದ ಬಂಡಾಯ ಎನ್ನುವುದನ್ನು ಬಿಟ್ಟು, ನರಗುಂದದ ಮುತ್ತಿಗೆ ಅಂತ ಬದಲಾವಣೆ ಮಾಡಬೇಕು, ನರಗುಂದದ ಮುತ್ತಿಗೆಯು ಕೂಡ ಸಾಕಷ್ಟು ಪರಿಣಾಮವನ್ನು ಬೀರಿತು ಕೂಡ, ಸಾಕಷ್ಟು ಪ್ರಬಾವವನ್ನು ಭೀರಿತು ಕೂಡ, ಹಾಗೆ ಜನರಲ್ಲಿ ಒಂದು ರೀತಿಯ ಆವೇಶವನ್ನು ಉಂಟು ಮಾಡಿತು ಎನ್ನ ಬಹುದು.

ಆಮೇಲೆ ನರಗುಂದ ಮುತ್ತಿಗೆಯಲ್ಲಿ ನಾಟಕವನ್ನು ನೋಡಲು ರಾಮದುರ್ಗದ ದೊರೆಗಳು ಬರುತ್ತಾ ಇದ್ದರಂತೆ. ಕೊನೆಯಲ್ಲಿ ಬರುವ ಅತ್ತೆ ಸೊಸೆಯರು ಬೆಂಕಿಗೆ ಹಾರುವ ಪ್ರಸಂಗವನ್ನು ಬೀಟ್ಟು ಉಳಿದೆಲ್ಲ ನೋಡಿ., ಕೊನೆಯ ಪ್ರಸಂಗವನ್ನು ನೋಡದರ ಹೋರಟು ಹೋಗುತ್ತಿದ್ದರು. ಆಮೇಲೆ ಅವರು ಆ ನಾಟಕವನ್ನ ಬರೆದಂತ ಅಚ್ಯುತ್ತರಾಯರ ಬಳಿ ಹೋಗಿ ನೀವೇನಾದರೂ ಈ ನಾಟಕವನ್ನು ಮರಾಠಿಯಲ್ಲಿ ಬರೆದಿದ್ದರೆ ನಿಮ್ಮನ್ನ ಆನೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಲಾಗುತ್ತಿತ್ತು ಎಂದರು. ಈಗ ನಿಮಗೆ ಮೆಚ್ಚುಗಾಗಿ ಎಡಕಲಿ ಎನ್ನುವಂತಹ ಬಿರುದನ್ನು ನೀಡಿ ಗೌರವಿಸಲಾಗುತ್ತದೆ. ಎಂದು ಹೇಳಿ ೫೦ ರೂಪಾಯಿ ಬಹುಮಾನವನ್ನು ಕೊಟ್ಟರಂತೆ. ಈ ರೀತಿಯಲ್ಲಿ ನಾಟಕ ತನ್ನ ಇತಿಹಾಸವನ್ನು ಮೂಡಿಸುವುದನ್ನು ನಾವು ನೋಡಬಹುದು.

ಈಗ ಕಂಪನಿಯ ನಾಟಕದಲ್ಲಿ ಬಹಳ ಮಹತ್ವಪೂರ್ಣ ಕಂಪನಿ ಎನ್ನಿಸಿದ್ದು ಗರಡ ಸದಾಶಿವ ರಾಯರದು. ಗರುಡ ಸಾದಶಿವ ರಾಯರಿಗೆ ಬಾಲ್ಯದಿಂದಲೇ ಇದ್ದಂಥ ನಾಟಕದ ಒಂದು ಪ್ರೀತಿ ಜೊತೆಗೆ ಸ್ವಾತಂತ್ರ್ಯ ಕುರಿತಾದ ಗಾಢವಾದ ಆವೇಶ. ಅವುಗಳ ಮೂಲಕವಾಗಿ ಅವರು ಹೆಚ್ಚು ಈ ಮಾರಾಠಿ ನಾಟಕಗಳ ಮತ್ತು ರಂಗಭೂಮಿಯಿಂದ ಮತ್ತು ಸಂಸ್ಕೃತಿಯಿಂದ ಪ್ರೇರಿಪಿತರಾಗಿದ್ದರು. ಅವರು ಗಡಿನಾಡಿನಲ್ಲಿ ಶಿವಾಜಿ ಉತ್ಸವ ಮತ್ತು ಗಣೇಶ ಉತ್ಸವ ವಿಶೇಷವಾಗಿ ನಡೆಯುತ್ತಿದ್ದವು. ಅವರು ಅದನ್ನ ನಡೆಸಲು ಪ್ರಾರಂಭಿಸಿದರು. ಮೊದಮೊದಲು ಅವರ ಮರಾಠಿ ಪ್ರಭಾವವಿರುವ ಕೀಷಕ ವದೆ ನಾಟಕವನ್ನು ಮರಾಠಿಯಲ್ಲಿ ನೋಡಿದಾಗ ಅದನ್ನ ಕನ್ನಡದಲ್ಲಿ ಹೊಸದಾಗಿ ಬರೆಯಲು ಶುರು ಮಾಡಿದರು. ಕನ್ನಡದಲ್ಲಿ ಬರೆದು ಸಂಭಾಷಣೆಯನ್ನು ಬರೆದು ಸನ್ನೀವೇಶದಲ್ಲಿ ಕೆಲವೊಂದು ಬದಲಾವಣೆಗಳನ್ನು ತರಲು ಶುರುಮಾಡಿದರು. ನಾಟಕವನ್ನು

ಪ್ರದರ್ಶನಕ್ಕೆ ತರಲು ಪ್ರಯತಿಸಿದರು. ನಾಟಕವನ್ನು ನೋಡಿದ ಜನರಿಗೆ ಕೀಚಕ ಯಾರು? ಕೀಚಕನ ಪ್ರಭಾವ ಏನು? ದ್ರೌಪದಿ ಯಾರು? ಎನ್ನುವುದೆಲ್ಲ ಗೊತ್ತಾಗಿ ಅಲ್ಲಿ ಮತ್ತೆ ಅವರು ಒಂದು ಸ್ವಾತಂತ್ರ್ಯ ಸಂಗ್ರಾಮದ ಚಿತ್ರಗಳನ್ನು ನೋಡುತ್ತಿದ್ದಾರೆ. ಅಂತಹ ಪ್ರಭಾವ ಆ ನಾಟಕ ಕೊಡುತ್ತಿದೆ .

ನಂತರದಲ್ಲಿ ಬಂದು ಒಂದು ನಾಟಕ ಕಂಸ ವಧೆ. ಅದಕ್ಕೆ ಇರುವ ಇನ್ನೋಂದು ಹೆಸರು ಮಾತೃಬಂಧ ವಿಮೋಚಿತ.ಜನರಿಗೆ ಎಷ್ಟು ರೂಢಿಯಾಗಿತ್ತಂದರೆ ಪ್ರತಿಯೋಂದು ನಾಟಕದಲ್ಲೂ ಹುಡುಕುತ್ತಿದ್ದರು. ಕತೆ ಪೌರಾಣಿಕವಾದರು, ಸಾಂಕೇತಿಕ ವಾದ ಸಂಭಾಷಣೆ ಕಂಸದ ಕ್ರೌರ್ಯ ಅವನ ಕಾರ್ಯ ಪ್ರವೃತ್ತಿ ಎಲ್ಲವನ್ನು ನೋಡಿದಾಗ ಅದು ಬ್ರೀಟಿಷರನ್ನು ನೆನಪು ಮಾಡುತ್ತಿತ್ತು. ಅವನ ಸೆರೆಯಲ್ಲಿದ್ದ ದೇವಕಿಯವರು ಭಾರತೀಯರು ಎಂದು ಗೊತ್ತಾಗುತ್ತ ಇತ್ತು.